# ಕರ್ನಾಟಕ ಸರ್ಕಾರ

ಸಂಖ್ಯೆ: ಇಎನ್ 05 ಸ್ವೀಮರ 2011

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 27.04.2011

M. D.
29 APR 2011
KPTCL

ಇಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಇಂಧನ ಇಲಾಖೆ,
ಬೆಂಗಳೂರು.

ಇವರಿಗೆ:

1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ನಂ: 82, ಶಕ್ತಿ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-1.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-9.
3. ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ಕಾರ್ಪೊರೇಟ್ ಕಛೇರಿ, ಕೆ.ಆರ್.ವೃತ್ತ, ಬೆಂಗಳೂರು-1.
4. ವ್ಯವಸ್ಥಾಪಕ ನಿರ್ದೇಶಕರು, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ, ಕಾರ್ಪೊರೇಟ್ ಕಛೇರಿ, ನವನಗರ, ಹುಬ್ಬಳ್ಳಿ-580 025.
5. ವ್ಯವಸ್ಥಾಪಕ ನಿರ್ದೇಶಕರು, ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ, ಕಾರ್ಪೊರೇಟ್ ಕಛೇರಿ, ಸ್ಟೇಷನ್ ರಸ್ತೆ, ಪರಿವಾರ್ ಹೋಟೆಲ್ ಎದುರುಗಡೆ, ಗುಲ್ಬರ್ಗಾ-585 102.
6. ವ್ಯವಸ್ಥಾಪಕ ನಿರ್ದೇಶಕರು, ಮಂಗಳೂರು ವಿದ್ಯುತ್ ಸರಬರಾಜು ಕಂಪನಿ, ಕಾರ್ಪೊರೇಟ್ ಕಛೇರಿ, ಅಂಚೆ ಪೆಟ್ಟಿಗೆ ಸಂಖ್ಯೆ: 200, ಪ್ಯಾರಾಡಿಂ ಪ್ಲಾಜಾ, ಎ.ಬಿ. ಶೆಟ್ಟಿ ವೃತ್ತ, ಮಂಗಳೂರು-575 001.
7. ವ್ಯವಸ್ಥಾಪಕ ನಿರ್ದೇಶಕರು, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಕಾರ್ಪೊರೇಟ್ ಕಛೇರಿ, ನಂ:927, ಎಲ್.ಜೆ. ಅವಿನ್ಯು ಕಮರ್ಷಿಯಲ್ ಕಾಂಪ್ಲೆಕ್ಸ್, ನ್ಯೂ ಕಾಂತರಾಜ್ ಅರಸ್ ರಸ್ತೆ, ಸರಸ್ವತಿಪುರಂ, ಮೈಸೂರು-570 009.
8. ಕಾರ್ಯದರ್ಶಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಎಂ.ಜಿ. ರಸ್ತೆ, ಬೆಂಗಳೂರು-1.
9. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ನಂ: 19, ಕ್ವೀನ್ಸ್ ರಸ್ತೆ, ಬೆಂಗಳೂರು-52.
10. ವ್ಯವಸ್ಥಾಪಕ ನಿರ್ದೇಶಕರು, ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್, ಕಾವೇರಿ ಭವನ, ಬೆಂಗಳೂರು.
11. ಮುಖ್ಯ ವಿದ್ಯುತ್ ಪರಿವೀಕ್ಷಕರು, ನಂ: 32/1-2, ಕ್ರೆಸೆಂಟ್ ಟವರ್ಸ್, ಕ್ರೆಸೆಂಟ್ ರಸ್ತೆ, ಬೆಂಗಳೂರು-2.

ಮಾನ್ಯರೆ,

ವಿಷಯ: ರಾಷ್ಟ್ರ ಲಾಂಛನವನ್ನು ಧ್ಯೇಯ ವಾಕ್ಯ "ಸತ್ಯಮೇವ ಜಯತೆ" ಯೊಂದಿಗೆ ಸಂಪೂರ್ಣವಾಗಿ ಪ್ರದರ್ಶಿಸುವ ಕುರಿತು.
ಉಲ್ಲೇಖ: ಸುತ್ತೋಲೆ ಸಂಖ್ಯೆ: ಸಿಆಸುಇ 13 ರಾರಾಅ 2011, ದಿನಾಂಕ: 31.03.2011.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸುತ್ತೋಲೆ ಪತ್ರದಲ್ಲಿನ ಅಡಕಗಳ ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಅಗತ್ಯ ಕ್ರಮ ಕೈಗೊಳ್ಳಲು ಕಳುಹಿಸಲಾಗಿದೆ.

ತಮ್ಮ ವಿಶ್ವಾಸಿ,

(ಸುರೇಶ್.ಬಿ.ಕೃಷ್ಣಪ್ಪನವರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.
☎22034674.

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 13 ರಾರಾಅ 2011

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 31.03.2011

## ಸುತ್ತೋಲೆ

ವಿಷಯ: ರಾಷ್ಟ್ರ ಲಾಂಛನವನ್ನು ಧ್ಯೇಯ ವಾಕ್ಯ "ಸತ್ಯಮೇವ ಜಯತೆ" ಯೊಂದಿಗೆ ಸಂಪೂರ್ಣವಾಗಿ ಪ್ರದರ್ಶಿಸುವ ಕುರಿತು.

ಉಲ್ಲೇಖ: 1) ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 104 ರಾರಾಅ 2010, ದಿನಾಂಕ 29.10.2010.

2) ಭಾರತ ಸರ್ಕಾರದ ಕೇಂದ್ರ ಗೃಹ ಮಂತ್ರಾಲಯದ ಪತ್ರ ಸಂಖ್ಯೆ: 13/1/2009-Public, ದಿನಾಂಕ 02.02.2011

*****

ಭಾರತ ರಾಷ್ಟ್ರ ಲಾಂಛನವನ್ನು ಧ್ಯೇಯ ವಾಕ್ಯ "ಸತ್ಯಮೇವ ಜಯತೆ" ಯೊಂದಿಗೆ ಸಂಪೂರ್ಣವಾಗಿ ಪ್ರದರ್ಶಿಸುವ ಕುರಿತು ಉಲ್ಲೇಖಿತ (1)ರಲ್ಲಿ ನಮೂದಿಸಿರುವ ದಿನಾಂಕ 29.10.2010ರ ಸುತ್ತೋಲೆಯನ್ನು ಹೊರಡಿಸಲಾಗಿತ್ತು. ಈ ಮಧ್ಯೆ ಉಲ್ಲೇಖಿತ (2)ರ ಭಾರತ ಸರ್ಕಾರದ ಕೇಂದ್ರ ಗೃಹ ಮಂತ್ರಾಲಯದ ದಿನಾಂಕ 02.02.2011ರ ಪತ್ರದಲ್ಲಿ, ಭಾರತದ ರಾಷ್ಟ್ರ ಲಾಂಛನವನ್ನು ಬಳಸಲು ಅಧಿಕಾರ ಹೊಂದಿರುವ ಸರ್ಕಾರಿ ಏಜೆನ್ಸಿಗಳು, ನಮೂನೆಯಲ್ಲಿ ಲಗತ್ತಿಸಿರುವ ಪ್ರಕಾರ ಸಿಂಹ ಮುಕುಟದ ಪಾರ್ಶ್ವ ಚಿತ್ರದ ಕೆಳಗೆ ಬರೆದ ದೇವನಾಗರಿ ಭಾಷೆಯಲ್ಲಿ "ಸತ್ಯಮೇವ ಜಯತೆ" ಧ್ಯೇಯ ವಾಕ್ಯವಿರುವ ರಾಷ್ಟ್ರ ಲಾಂಛನದ ಪೂರ್ಣ ಚಿತ್ರ ಬಳಸದಿರುವುದು ಗಮನಕ್ಕೆ ಬಂದಿದೆ. ಆದಕಾರಣ, ಈ ಬಗ್ಗೆ ಮತ್ತೊಮ್ಮೆ ಸೂಕ್ತ ಸೂಚನೆಗಳನ್ನು ಸಂಬಂಧಪಟ್ಟ ಏಜೆನ್ಸಿಗಳಿಗೆ ನೀಡಬೇಕೆಂದು ತಿಳಿಸಿರುತ್ತದೆ.

2. ಭಾರತದ, ರಾಷ್ಟ್ರ ಲಾಂಛನದ ಅಪೂರ್ಣ ಪ್ರದರ್ಶನವು, ಭಾರತದ ರಾಷ್ಟ್ರ ಲಾಂಛನ (ಅನುಚಿತ ಬಳಕೆಯ ನಿಷೇಧ) ಅಧಿನಿಯಮ, 2005 ಮತ್ತು ಭಾರತದ ರಾಷ್ಟ್ರ ಲಾಂಛನ (ಬಳಕೆಯ ನಿಯಂತ್ರಣ) ನಿಯಮಗಳು, 2007ರ ಉಲ್ಲಂಘನೆಯಾಗುತ್ತದೆ.

........2

3. ವಿವಿಧ ಸರ್ಕಾರಿ ಉದ್ದೇಶಗಳಿಗಾಗಿ ಭಾರತದ ರಾಷ್ಟ್ರ ಲಾಂಛನವನ್ನು ಬಳಸಲು ಅಧಿಕಾರ ಹೊಂದಿರುವ ಸರ್ಕಾರಿ ಏಜೆನ್ಸಿಗಳು, ನಮೂನೆಯಲ್ಲಿ ಲಗತ್ತಿಸಿರುವ ಪ್ರಕಾರ ಸಿಂಹ ಮುಕುಟದ ಪಾರ್ಶ್ವ ಚಿತ್ರದ ಕೆಳಗೆ ದೇವನಾಗರಿ ಭಾಷೆಯಲ್ಲಿ ಬರೆದ "ಸತ್ಯಮೇವ ಜಯತೆ" ಧ್ಯೇಯವಾಕ್ಯವಿರುವ ರಾಷ್ಟ್ರ ಲಾಂಛನದ ಪೂರ್ಣ ಚಿತ್ರವನ್ನು ಬಳಸಬೇಕು ಎಂಬುದನ್ನು ಪುನರುಚ್ಛರಿಸಲಾಗಿದೆ. ಈ ಸಂಬಂಧದಲ್ಲಿ ದಯವಿಟ್ಟು ಅಗತ್ಯ ಸೂಚನೆಗಳನ್ನು ತಮ್ಮ ಆಡಳಿತಾತ್ಮಕ ವ್ಯಾಪ್ತಿಯಲ್ಲಿ ಬರುವ ಇಲಾಖಾ ಮುಖ್ಯಸ್ಥರು / ಸರ್ಕಾರಿ ಸಂಸ್ಥೆಗಳಿಗೆ ಮತ್ತೊಮ್ಮೆ ನೀಡಿ "ಸತ್ಯಮೇವ ಜಯತೆ" ಧ್ಯೇಯ ವಾಕ್ಯವನ್ನು ರಾಷ್ಟ್ರ ಲಾಂಛನದಿಂದ ಹೊರತುಪಡಿಸದಂತೆ ನೋಡಿಕೊಳ್ಳಬೇಕೆಂದು ಕೋರಿದೆ.

(ಪಿ. ಶಿವಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಆಸುಇ (ರಾಜಕೀಯ)
3/13

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು - ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವಂತೆ ಹಾಗೂ 100 ಪ್ರತಿಗಳನ್ನು ಒದಗಿಸುವಂತೆ ಕೋರಲಾಗಿದೆ.

ಪ್ರತಿಗಳು:

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು.
2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
3. ಘನತೆವೆತ್ತ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿ, ರಾಜಭವನ, ಬೆಂಗಳೂರು.
4. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು / ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ / ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು.
5. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
6. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

ಪ್ರತಿ:

ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು.

APPENDIX I



सत्यमेव जयते

*Note.*—This design is in simplified form and meant for reproduction in small sizes, such as for use in stationery, seals and die-printing.

## APPENDIX II




*Note.*— This design is more detailed and meant for reproduction in bigger sizes.

T. K. VISWANATHAN,
*Secy. to the Govt. of India.*